**ದಿಃ03.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಪಿ.ಎಸ್. ವಕೀಲರಿಂದ ಃ**

1. 2023 ರ ಅಕ್ಟೋಬರ್ ತಿಂಗಳ ವೇತನ ಪಟ್ಟಿ ನಿಪಿ.41 ಎಂದು ಗುರುತಿಸಿದ್ದೇನೆ.

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ಅಪಘಾತ ಕಾಲಕ್ಕೆ ನಾನು ಭಾಗಮಂಡಲದಿಂದ ಚೆಟ್ಟಿಮಾಣಿ ಗ್ರಾಮಕ್ಕೆ ಕೆಲಸ ಮುಗಿಸಿಕೊಂಡು ಹೋಗುತ್ತಿದ್ದೆ. ಅಪಘಾತ ಕಾಲಕ್ಕೆ ನಾನು ಸ್ಕೂಟಿಯಲ್ಲಿ ಹೋಗುತ್ತಿದ್ದೆ. ಸದರಿ ಸ್ಕೂಟಿಯನ್ನು ಧನಂಜಯ ಎಂಬುವವರು ಓಡಿಸುತ್ತಿದ್ದರು. ಧಂನಜಯ ಈತನಿಗೆ ವಾಹನ ಚಾಲನೆ ಮಾಡಲು ಪರವಾನಿಗೆ ಇತ್ತು. ಸದರಿಯವರಿಗೆ ಸೇರಿದ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಆ ರೀತಿ ಯಾವುದೇ ಚಾಲನಾ ಪ್ರಮಾಣ ಪತ್ರವನ್ನು ನ್ಯಾಯಾಯದ ಮುಂದೆ ಹಾಜರು ಮಾಡಿಲ್ಲಸುಳ್ಳು ಸಾಕ್ಷ್ಯ ನುಡಿಯುತ್ತಿ ದಾರಾ ಎಂದರೆ ಸಾಕ್ಷಿ ಮುಂದೆ ಹಾಜರು ಮಾಡುತ್ತೇನೆ ಎನ್ನುತಾತರೆ. ಅಪಘಾತ ಕಾಲಕ್ಕೆ ನಾನು ಹೆಲ್ಮೆಟ್ ಧರಿಸಿರಲಿಲ್ಲ. ಅಪಘಾತ ಸ್ಥಳದಲ್ಲಿ ರಸ್ತೆ ತಿರುವಿನಿಂದ ಕೂಡಿದೆ ಎಂದರೆ ಸಾಕ್ಷಿ ಸುಮಾರು 30 ಮಿ.

ನಿಂದ 40 ಮಿ ದೂರದಷ್ಟು ಮುಂದಿನ ದೃಶ್ಯ ಕಾಣಿಸುತ್ತಿತ್ತು ಎನ್ನುತ್ತಾರೆ. ನಾನು ಹೇಳಿದ ರೀತಿ ಅಪಘಾತ ಸಂಭವಿಸಿಲ್ಲ ಮತ್ತು ನನಗಾಗಿರುವ ಗಾಯಗಳು ಅಪಘಾತದಲ್ಲಿ ಆಗಿರು ಗಾಯ ಅಲ್ಲ ಎಂದರೆ ಸರಿಯಲ್ಲ. ಅಪಘಾತ ದಿಃ15.12.2023 ರಂದು ಸಂಭವಿಸಿದೆ. ನನ್ನನ್ನು ಸ್ಥಳೀಯರು ಆಸ್ಪತ್ರೆಗೆ ಸೇರಿಸಿದರು. ನನ್ನನ್ನು ಆಸ್ಪತ್ರೆಗೆ ಸೇರಿಸಿದಾಗ ಸ್ವಲ್ಪ ಪ್ರಜ್ಞೆ ಇತ್ತು. ಸಾಕ್ಷಿ ಮುಂದುವರೆದು ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಅದೇ ದಿನ ಮಂಗಳೂರಿಗೆ ಕರೆದುಕೊಂಡು ಹೋಗಲಾಯಿತು ಎನ್ನುತ್ತಾರೆ.ನಾನು ಪ್ರಯಾಣ ಮಾಡುತ್ತಿದ್ದ ಸ್ಕೂಟಿಯ ಚಾಲಕನಿಗೆ ಅಪಘಾತದಲ್ಲಿ ಸಣ್ಣ ಪುಟ್ಟಗಾಯಗಳು ಆಗಿದ್ದವು. ನಾನು ಪ್ರಯಾಣ ಮಾಡುತ್ತಿದ್ದ ಸ್ಕೂಟಿಗೆ ಅಪಘಾತದಲ್ಲಿ ಜಕಂ ಆಗಿತ್ತು. ಈ ಸಂಬಂಧ ನಾನು ನ್ಯಾಯಾಲಯದ ಮುಂದೆ ದಾಖಲೆ ಹಾಜುರು ಮಾಡಿಲ್ಲ. ಸಾಕ್ಷಿ ಮುಂದುವರೆದು ಸ್ಕೂಟಿ ಪೊಲೀಸ್ ಠಾಣೆಯಲ್ಲಿ ಇದೆ ಎನ್ನುತ್ತಾರೆ. ಅಪಘಾತ ಸಂಬಂಧ ಅದೇ ದಿನ ಪೊಲೀಸರಿಗೆ ದೂರು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಪೊಲೀಸರು ಬಂದಿರಲಿಲ್ಲ ಎನ್ನುತ್ತಾರೆ. ಭಾಗಮಂಡಲ ಪೋಲೀಸ್ ಠಾಣೆ ಅಪಘಾತ ಸ್ಥಳದಿಂದ 4 ರಿಂದ 5 ಕಿ.ಮಿ ದೂರದಲ್ಲಿ ಇದೆ ಎಂದರೆ ಸಾಕ್ಷಿ 5 ಕಿ.ಮಿ ದೂರದಲ್ಲಿ ಇದೆ ಎನ್ನುತ್ತಾರೆ. ಪ್ರಜ್ಞೆ ಬಂದ ನಂತರ ಪೊಲೀಸರಿಗೆ ದೂರು ದಾಖಲು ಮಾಡಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಪೊಲೀಸರು ಆಸ್ಪತ್ರೆಗೆ ಬರುತ್ತಾರೆ ಎಂದು ಮಾಹಿತಿ ಇತ್ತು ಆದರೆ ಪೊಲೀಸರು ಬರಲಿಲ್ಲ ಎನ್ನುತ್ತಾರೆ. ಆಸ್ಪತ್ರೆಯಲ್ಲಿ ನನಗೆ ಗಾಯ ಹೇಗೆ

ಆಗಿದೆ ಎಂದು ಮಹಿತಿ ಕೊಟ್ಟಿದ್ದೇನೆ. ನಿಪಿ.2 ರ ಪ್ರಕಾರ ದಿಃ15.02.2024 ರಂದು ಅಪಘಾತ ಸಂಬಂಧ ದೂರು ದಾಖಲಾಗಿದೆ ಎಂದರೆ ಸರಿ. ಆ ದಿನ ಯಾವುದೇ ಅಪಘಾತ ಸಂಭವಿಸಿಲ್ಲ ಹಾಗಾಗಿ ಪೊಲೀಸರಿಗೆ ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಅಪರಿಚಿತ ಘಟನೆಯಲ್ಲಿ ಆದ ಗಾಯವನ್ನು ದುರುಪಯೋಗ ಪಡಿಸಿಕೊಂಡು ವಿಮೆಗೆ ಒಳಪಟ್ಟ ವಾಹನವನ್ನು ಸುಳ್ಳಾಗಿ ಸೇರ್ಪಡೆ ಮಾಡಿ ಮೂರು ತಿಂಗಳ ನಂತರ ದೂರು ದಾಖಲೆ ಮಾಡಲಾಗಿದೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಅಪಾಧಿತ ಕಾರಣ ಯಾರು ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಚಾಲನಾ ಸೀಟಿನಲ್ಲಿ ಯಾರೊ ಗಂಡಸರು ಕುತ್ತಿದ್ದರು ಮತ್ತು ಸ್ಟೇರಿಂಗ್ ನ್ನು ಅವರ ಪಕ್ಕದ ಸೀಟಿನಲ್ಲಿ ಕುಳಿತ್ತಿದ್ದ ಮಹಿಳೆ ಹಿಡಿದಿದ್ದರು ಎನ್ನುತ್ತಾರೆ. ಸ್ಟೇರಿಂಗ್ ಹಿಡಿದಿದ್ದ ಮಹಿಳೆ ಹೆಸರು ಲಕ್ಷ್ಮೀ. ನಿಪಿ.1 ರ ಪ್ರಥಮ ವರ್ತಮಾನ ವರದಿಯಲ್ಲಿ ಆರೋಪಿ ಹೆಸರನ್ನು ಪ್ರಸನ್ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ.7 ರ ಅಂತಿಮ ದೋಷಾರೋಪಣಾ ಪತ್ರದಲ್ಲಿ ಆರೋಪಿಯನ್ನು ಸ್ವಪ್ನಲಕ್ಷ್ಮೀ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವಪ್ನಲಕ್ಷ್ಮೀ ಪ್ರಸನ್ ಇವರ ಜೊತೆಯಲ್ಲಿ ಇದ್ದರು ಅವರು ಒಪ್ಪಿಕೊಂಡ ಮೇರೆಗೆ ಅವರ ಹೆಸರನ್ನು ಹಾಕಲಾಗಿದೆ ಎನ್ನುತ್ತಾರೆ. ಆ ದಿನ ಯಾವುದೇ ಅಪಘಾತ ಸಂಭವಿಸಿಲ್ಲ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ

ವಿಮೆಗೆ ಒಳಪಟ್ಟ ವಾಹನವನ್ನು ಈ ಅಪಘಾತ ಕತೆಯಲ್ಲಿ ಸುಳ್ಳಾಗಿ ಸೇರ್ಪಡೆ ಮಾಡಲಾಗಿದೆ ಎಂದರೆ ಸರಿಯಲ್ಲ.

2. ನಾನು ಕೊಡಗು ಜಿಲ್ಲಾ ಆಸ್ಪತ್ರೆಯಲ್ಲಿ ಮತ್ತು ಮಂಗಳೂರಿನ ತೇಜಶ್ವಿನಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚುವರಿ ಚಿಕಿತ್ಸೆಯನ್ನು ಪುನಃ ಒಚರೋಗಿಯಾಗಿ ದಾಖಲಾಗಿ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಪಿ.ಯು.ಸಿ ವರೆಗೆ ವ್ಯಾಸಂಗ ಮಾಡಿದ್ದೆನೆ. ಅಪಘಾತ ಪೂರ್ವದಲ್ಲಿ ನಾನು ಸಿ.ಎಂ.ಎಸ್ ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಸದರಿ ಬ್ಯಾಂಕಿನಲ್ಲಿ ನಾನು ಕ್ಯಾಶ್ ಮ್ಯಾನೇಜಮೆಂಟ್ ಹುದ್ದೆಯನ್ನು ನಿರ್ವಹಿಸುತ್ತಿದ್ದೆ. ಸಿ.ಎಂ.ಎಸ್ ಬ್ಯಾಂಕಿನಲ್ಲಿ ವರ್ಷಕೊಮ್ಮ ಬೋನಸ್ ಕೊಡುತ್ತಿದ್ದರು. ನಿಪಿ.41 ರಲ್ಲಿ ಬೋನಸ್ ಸೇರ್ಪಡೆ ಆಗಿದೆ ಎಂದರೆ ಸರಿ. ವಾಸ್ತವ ಸಂಬಳ ಪ್ರಮಾಣವನ್ನು ರುಜುವಾತು ಮಾಡಲು 2023 ರ ಸೇಪ್ಟೆಂಬರ್ ತಿಂಗಳ ವೇತನ ಪಟಿಟಯನ್ನು ಹಾಜರು ಮಾಡಲು ನಿಮಗೇನಾದರೂ ತೊಂದರೆ ಇದೇಯಾ ಎಂದರೆ ಸಾಕ್ಷಿ ಬ್ಯಾಂಕಿನಲ್ಲಿ ಅಧಿಕಾರಿಗಳು ಬದಲಾವಣೆ ಆಗಿದ್ದರಿಂದ ದಾಖಲೆ ಪಡೆಯುವುದು ಕಷ್ಟ ಎನ್ನುತ್ತಾರೆ. ನಿಪಿ.41 ರಂತೆ ಬೋನಸ್ ಸೇರ್ಪಡೆ ಆಗಿರುವುದರಿಂದ ನನ್ನ ವೇತನ ಪ್ರಮಾಣ ಹೆಚ್ಚಳ ಆಗಿದೆ ಎಂದರೆ ಸರಿ. ನಾನು ಹೇಳಿದಂತೆ ನಾನು ಬ್ಯಾಂಕ್ ನೌಕರನಲ್ಲ ಮತ್ತು ನನಗೆ ವಾರ್ಷಿಕವಾಗಿ 2,50,000/- ರೂ ವರಮಾನ

ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ನಾನು ಕಾಫಿ ಕೃಷಿ ಮಾಡುತ್ತಿದೆ. ನನ್ನ ಕುಟುಂಬಕ್ಕೆ ಮೂರು ಎಕರೆ ಜಮೀನು ಇದೆ. ಜಮೀನಿನ ಆರ್.ಟಿಸಿ ನನ್ನ ಅಜ್ಜನ ಹೆಸರಿನಲ್ಲಿ ಇದೆ. ನನ್ನ ಹೆಸರನಲ್ಲಿ ಯಾವುದೇ ಕೃಷಿ ಭೂಮಿ ಇಲ್ಲ. ನ್ಯಾಯಾಲಯದ ಮುಂದೆ ಆರ್ ಟಿ ಸಿ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಹೇಳಿದ ಹಾಗೆ ಯಾವುದೇ ಕೃಷಿ ಭೂಮಿ ಇಲ್ಲ ಹಾಗಾಗಿ ನಾನು ನ್ಯಾಯಾಲಯದ ಮುಂದೆ ಆರ್.ಟಿ ಸಿ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ಹಾಜರು ಮಾಡುತ್ತೇನೆ ಎನ್ನುತ್ತಾರೆ. ಕೃಷಿ ಮೂಲದಿಂದ ನನಗೆ 4ವಾರ್ಷಿಕ 4,20,000/- ರೂ ವರಮಾನ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನಗೆ 29 ವರ್ಷ ವಯಸ್ಸು ಆಗಿತ್ತು. ನಿಮ್ಮ ವಯಸ್ಸನ್ನು ರುಜುವಾತು ಮಾಡಲು ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಿಪಿ.41 ರಲ್ಲಿ ನನ್ನ ವಯಸ್ಸನ್ನು ನಮೂದು ಮಾಡಲಾಗಿದೆ ಎನ್ನುತ್ತಾರೆ. ಚಿಕಿತ್ಸಾ ಕಾಲಕ್ಕೆ ಪ್ರಯಾಣ ಖರ್ಚು, ಪೌಷ್ಟಿಕ ಆಹಾರ ಸೇವನೆ, ನನ್ನನ್ನು ನೋಡಿಕೊಳ್ಳಲು ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನಗೆ ಭವಿಷ್ಯದಲ್ಲಿ ಹೆಚ್ಚುವರಿ ಚಿಕಿತ್ಸೆ ಪಡೆಯಬೇಕೆಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತಇಸಿದಲ್ಲಿ ಆದ ಗಾಯದಿಂದಾಗಿ ಅಂಗನ್ಯೂನ್ಯತೆ ಅಂಭವಿಸಿದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

ನನಗೆ ಅಪಘಾತ ಸಂಭವಿಸಿದೆ ಇದ್ದರು ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದೂರು ದಾಖಲೆ ಮಾಡಿ ಸುಳ್ಳು ಪರಿಹಾರ ಅರ್ಜಿ ಸಲ್ಲಿಸಿದ್ದೇನೆ ಎದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನಗಾಗಿರುವ ಗಾಯಕ್ಕೂ ಮತ್ತು ನಾನು ಹೇಳಿರುವ ಅಪಘಾತಕ್ಕೂ ಯಾವುದೇ ಸಂಭಂದ ಇಲ್ಲ ಎಂದರೆ ಸರಿಯಲ್ಲ. 3ನೇ ಎದುರುದಾರರ ಸಂಸ್ಥೆ ಯಾವುದೇ ಪರಿಹಾರ ಕೊಡಲು ಭಾದ್ಯಸ್ಥ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/–
(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.